ಈ) ಸಗ್ರಾಲಿಯೋ: ಬಡತನ ರೇಖೆಗಿಂತ ಕೆಳಗಿರುವಂತಹ ಗ್ರಾಮೀಣ ಜನತೆಗಾಗಿಯೇ ಹಮ್ಮಿಕೊಂಡಿರುವ ಈ ಯೋಜನೆಯಿಂದ ಫಲಾನುಭವಿಗಳು ಅವರ ಜೀವನೋಪಾಯಕ್ಕಾಗಿ ವಿವಿಧ ವೃತ್ತಿಗಳನ್ನು ಅಂದರೆ ಗುಡಿ ಕೈಗಾರಿಕೆ, ಪಶುಪಾಲನೆ, ಹೈನುಗಾರಿಕೆ, ವ್ಯಾಪಾರ, ಸಸ್ಯ ಕೈಗಾರಿಕೆ, ಪಶುಪಾಲನೆ, ಹೈನುಗಾರಿಕೆ, ವ್ಯಾಪಾರ, ಸಸ್ಯಸಂರಕ್ಷಣೆ, ಕುರಿಸಾಕಾಣಿಕೆ, ವ್ಯವಸಾಯ ಮುಂತಾದವುಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಆರ್ಥಿಕವಾಗಿ ಅಭಿವೃದ್ಧಿಯಾಗಿರುವುದು ಕಂಡುಬರುತ್ತದೆ.

ಟ್ರೈಸಂ: ಈ ಕಾರ್ಯಕ್ರಮದಡಿ ಅನೇಕ ವೃತ್ತಿಗಳಲ್ಲಿ ತರಬೇತಿಯನ್ನು ಹೊಂದಿ ಗ್ರಾಮೀಣ ಯುವ ಜನತೆಯು ಸ್ವಉದ್ಯೋಗಿಗಾಳಾಗಿರುತ್ತಾರೆ. ಕೆಲವರು ಕೂಲಿಕಾರ್ಮಿಕರಾಗಿ ಜೀವನ ನಡೆಸುತ್ತಿದ್ದಾರೆ.

ಡ್ವಾಕ್ರಾ : ಮಹಿಳೆಯ ಅಭಿವೃದ್ಧಿಗಾಗಿಯೇ ವಿಶೇಷವಾಗಿ ಹಮ್ಮಿಕೊಂಡಿರುವ ಈ ಕಾರ್ಯಕ್ರಮದ ಪ್ರಯೋಜನೆಯಿಂದ ಗ್ರಾಮೀಣ ಮಹಿಳೆಯರು ಆಕರ್ಷಿತರಾಗಿ ಅನೇಕ ಗುಡಿ ಕೈಗಾರಿಕೆಗಳು, ವ್ಯಾಪಾರ ಮುಂತಾದವುಗಳಲ್ಲಿ ತಮ್ಮ ಬಿಡುವಿನ ವೇಳೆಯನ್ನು ಸದುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಸಂಸಾರ ನಿರ್ವಹಣೆಗೆ ಆರ್ಥಿಕವಾಗಿಯೂ ಮಹಿಳೆಯರು ತಮ್ಮ ಪಾಲಿನ ನೆರವು ನೀಡವುತ್ತಿರುವುದು ಒಂದು ಉತ್ತಮ ಬೆಳವಣಿಗೆ ಹಾಗೂ ಅವರಿಗೆ ನೈತಿಕ ಸ್ಥೈರ್ಯ ದೊರಕಿಸಿಕೊಟ್ಟಿದೆ.

ಜೆ.ಆರ್.ವೈ : ಈ ಯೋಜನೆಯಡಿ ರಸ್ತೆ, ಚರಂಡಿ, ಸಮುದಾಯ ಭವನ, ಪ್ರಾಥಮಿಕ ಶಾಲಾ ಕಟ್ಟಡ, ಅಂಗನವಾಡಿ, ಸಮುದಾಯ ಭವನ, ಪ್ರಾಥಮಿಕ ಶಾಲಾ ಕಟ್ಟಡ, ಅಂಗನವಾಡಿ, ಸಾಮಾಜಿಕ ಅರಣ್ಯ, ಪಂಚಾಯತ ಕಟ್ಟಡ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ವೈಯಕ್ತಿಕ ಲಾಭದಾಯಕ ಆಸ್ತಿಗಳು, ಜನಶಿಕ್ಷಣ ನಿಲಯ ಇತ್ಯಾದಿ.

ಇಂದಿರಾ ಅವಾಜ್‌ಯೋಜನೆ: ಈ ಯೋಜನೆಯಡಿ ಬಡ ಕುಟುಂಬಗಳಿಗಾಗಿ ಮನೆಗಳನ್ನು ತೆಗೆದುಕೊಳ್ಳಲಾಗಿದೆ.

ದಶಲಕ್ಷ ಬಾವಿ ಯೋಜನೆ : ಈ ಯೋಜನೆಯಡಿ ತೆರೆದ ಬಾವಿ, ಭೂಸಾರ ಸಂರಕ್ಷಣಾ ಕಾಮಗಾರಿಗಳು, ಸಣ್ಣ ನೀರಾವರಿ ಇತ್ಯಾದಿ.

ಉ.ಭ.ಯೋ : ಈ ಯೋಜನೆಯಡಿ ರಸ್ತೆ, ಕಟ್ಟಡ, ಸಣ್ಣ ನೀರಾವರಿ, ಅರಣ್ಯ, ಅಂಗವಾಡಿ, ಪ್ರಾಥಮಿಕ ಶಾಲಾಕಟ್ಟಡ ತೋಟಗಾರಿಕೆ ಕಾಮಗಾರಿಗಳು ಇತ್ಯಾದಿ.

ನೆಮ್ಮದಿ : ಈ ಯೋಜನೆಯಡಿ ರಸ್ತೆ, ಸಣ್ಣ ನೀರಾವರಿ ಪ್ರಾಥಮಿಕ ಶಾಲಾ ಕಟ್ಟಡ, ಅಂಗನವಾಡಿ, ತೋಟಗಾರಿಕೆ ಕಾಮಗಾರಿಗಳು ಇವುಗಳನ್ನು ತೆಗೆದುಕೊಳ್ಳಲಾಗಿದೆ.

# ಅನುಬಂಧ

ರಾಜ್ಯದಲ್ಲಿ ಒಟ್ಟು 1509 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇವೆ. ಜಿಲ್ಲಾವಾರು ವಿವರಗಳು ಈ ಕೆಳಗಿನಂತಿರುತ್ತದೆ.

| ಕ್ರಮ ಸಂಖ್ಯೆ | ಜಿಲ್ಲೆ | ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ |
|---|---|---|
| 1. | ಬೆಂಗಳೂರು (ನಗರ) | 29 |
| 2. | ಬೆಂಗಳೂರು (ಗ್ರಾಮಾಂತರ) | 68 |
| 3. | ಚಿತ್ರದುರ್ಗ | 81 |
| 4. | ಕೋಲಾರ | 74 |
| 5. | ಶಿವಮೊಗ್ಗ | 68 |
| 6. | ತುಮಕೂರು | 89 |
| 7. | ಬೆಳಗಾಂ | 122 |
| 8. | ಬಿಜಾಪುರ | 96 |
| 9. | ಧಾರವಾಡ | 95 |
| 10. | ಉತ್ತರ ಕನ್ನಡ | 57 |
| 11. | ಬಳ್ಳಾರಿ | 60 |
| 12. | ಬೀದರ | 40 |
| 13. | ಗುಲ್ಬರ್ಗ | 94 |
| 14. | ರಾಯಚೂರು | 76 |
| 15. | ಚಿಕ್ಕಮಗಳೂರು | 45 |

| | | |
|---|---|---|
| 16. | ದಕ್ಷಿಣ ಕನ್ನಡ | 120 |
| 17. | ಹಾಸನ | 72 |
| 18. | ಕೊಡಗು | 29 |
| 19. | ಮಂಡ್ಯ | 61 |
| 20. | ಮೈಸೂರು | 133 |
| | ಒಟ್ಟು | 1509 |

ರಾಜ್ಯದಲ್ಲಿ 1996-97ನೇ ಸಾಲಿನಲ್ಲಿ ಒಟ್ಟು 50 ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಗುಡಿ ನಿಗದಿಪಡಿಸಿದೆ. ಹಾಗೂ ಸದರಿ ವಿಷಯವು ಪುಸಕ್ತ ಸರ್ಕಾರ ಹಂತದಲ್ಲಿದೆ.

***ವಿಷಯ : ರಾಜ್ಯದಲ್ಲಿ ವೈದ್ಯಕೀಯ : ದಂತಕಾಲೇಜುಗಳನ್ನು ಪ್ರಾರಂಭಿಸುವುದಕ್ಕೆ ಬಂದಂಥ ಅರ್ಜಿಗಳು***

1385 (1966)-ಶ್ರೀ ಹೆಚ್. ಶಿವಪ್ಪ (ಹರಿಹರ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ರಾಜ್ಯದಲ್ಲಿ ವೈದ್ಯಕೀಯ ದಂತ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರಕ್ಕೆ ಬಂದಿರುವ ಅರ್ಜಿಗಳೆಷ್ಟು?

ಆ) ಸದರಿ ಅರ್ಜಿಗಳನ್ನು ಮಂಜೂರಾತಿ ನೀಡಿ ಪರಿಗಣಿಸುವ ಇಚ್ಛೆ ಸರ್ಕಾರಕ್ಕಿದೆಯೇ?

ಡಾ. ಎಂ. ಶಂಕರ ನಾಯಕ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)

ಅ) 40

ಆ) ವೈದ್ಯಕೀಯ ದಂತ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ ತಜ್ಞರ ಸಮಿತಿಯನ್ನು ನೇಮಿಸಲಾಗಿದ್ದು, ಸಮಿತಿ ಮಧ್ಯಂತರ ವರದಿಯನ್ನು ದಿನಾಂಕ 24-8-97ರಂದು ಸಲ್ಲಿಸಿದೆ.